SEPTEMBER 11, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**1893 ಸೆಪ್ಟೆಂಬರ್ 11,** ಷಿಕ್ಯಾಗೋ ಸರ್ವಧರ್ಮ ಸಮ್ಮೇಳನದಲ್ಲಿ, ಸ್ವಾಮಿ ವಿವೇಕಾನಂದರು ಮಾಡಿದ, ವಿಶ್ವವಿಖ್ಯಾತ ಭಾಷಣದ 132ನೇ ವಾರ್ಷಿಕೋತ್ಸವದ ಸ್ಮರಣಾರ್ಥ, ಇಂದು, ದೇಶಾದ್ಯಂತ 'ದಿಗ್ವಿಜಯ ದಿನ' ಹಾಗೂ ಸಾರ್ವತ್ರಿಕ 'ಭ್ರಾತೃತ್ವ ದಿನ' ಆಚರಿಸಲಾಗುತ್ತಿದೆ.

<><><>

**ಇಂದು, ರಾಷ್ಟ್ರೀಯ ಅರಣ್ಯ** ಹುತಾತ್ಮರ ದಿನ. ದೇಶದ ಅರಣ್ಯ ಮತ್ತು ವನ್ಯಜೀವಿ ಸಂಪತ್ತಿನ ರಕ್ಷಣೆಗಾಗಿ, ಜೀವತೆತ್ತ ಮಹನೀಯರಿಗೆ, ಗೌರವ ಸಮರ್ಪಿಸಲಾಗುತ್ತಿದೆ. 1730ರಲ್ಲಿ, ಅರಣ್ಯ ರಕ್ಷಣೆಗಾಗಿ, ರಾಜಸ್ಥಾನದ ಕೆಚಾರ್ಲಿಯಲ್ಲಿ, ಬಿಷ್ಣೋಯಿ ಸಮುದಾಯದ, 363 ಜನ ಬಲಿದಾನ ನೀಡಿದ ಸ್ಮರಣಾರ್ಥ, ಇಂದು ರಾಜ್ಯಾದ್ಯಂತ ಅರಣ್ಯ ಹುತಾತ್ಮರ ದಿನ, ಆಚರಿಸಲಾಗುತ್ತಿದೆ.

<><><>

**ಧಾರವಾಡದ ಅರಣ್ಯ ಸಂಕೀರ್ಣ** ಭವನದಲ್ಲಿ, ಇಂದು ಬೆಳಗ್ಗೆ ಜಿಲ್ಲಾ ನ್ಯಾಯಾಧೀಶರಾದ, ಬಿ.ಎಸ್. ಭಾರತಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಿ. ಯತೀಶಕುಮಾರ, ಹುತಾತ್ಮ ಸ್ಮಾರಕಕ್ಕೆ ಗೌರವ ಸಮರ್ಪಿಸಿದರು.

<><><>

**ಭೂ ದಾನ ಚಳವಳಿ ಮೂಲಕ,** ಹೆಸರುವಾಸಿಯಾದ, ಸ್ವಾತಂತ್ರ್ಯ ಸೇನಾನಿ, ಗಾಂಧಿವಾದಿ, ವಿನಾಯಕ ನರಹರಿ ಭಾವೆ, ಆಚಾರ್ಯ ವಿನೋಬಾ ಭಾವೆ ಅವರ, ಜನ್ಮ ದಿನವಾದ ಇಂದು, ರಾಜ್ಯದ ಹಲವೆಡೆ ವಿಧಾಯಕ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

**11ನೇ ಕಾಮನ್ ವೆಲ್ತ್ ಸಂಸದೀಯ ಸಂಘದ,** ಭಾರತ ವಿಭಾಗದ ಸಮ್ಮೇಳನ, ಇಂದಿನಿಂದ 3 ದಿನಗಳ ಕಾಲ, ಬೆಂಗಳೂರಿನಲ್ಲಿ ನಡೆಯಲಿದೆ. ಇಂದು ಸಂಜೆ 5 ಗಂಟೆಗೆ, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿತ ಕಾರ್ಯಕ್ರಮದಲ್ಲಿ, ಲೋಕಸಭೆ ಸಭಾಧ್ಯಕ್ಷ ಓಂ ಬಿರ್ಲಾ, ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನಸಭೆ ಸ್ಪೀಕರ್ ಯುಟಿ.ಖಾದರ್ ಸೇರಿದಂತೆ, ಕಾಮನ್ ವೆಲ್ತ್ ರಾಷ್ಟ್ರಗಳ 9 ಜನ ವಿಶೇಷ ಅತಿಥಿಗಳು ಹಾಗೂ ಗಣ್ಯರು, ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ರೇಲ್ವೆ ಅಪಘಾತ ಸಂಭವಿಸಿದಾಗ,** ತುರ್ತು ಕಾರ್ಯಾಚರಣೆ ಹಾಗೂ ನಿರ್ವಹಿಸುವ, ಅಣಕು ಕಾರ್ಯಾಚರಣೆ, ನೈಋತ್ಯ ರೇಲ್ವೆಯ, ಹುಬ್ಬಳ್ಳಿ ವಿಭಾಗದಿಂದ, ಹುಬ್ಬಳ್ಳಿಯ ರೇಲ್ವೆ ಯಾರ್ಡ್‌ನಲ್ಲಿ, ಜರುಗಿತು. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ರೇಲ್ವೆ ರಕ್ಷಣಾ ಪಡೆ, ರಾಜ್ಯ ಪೊಲೀಸ್ ಇಲಾಖೆ, ಅಗ್ನಿಶಾಮಕ ಹಾಗೂ ಗೃಹ ರಕ್ಷಕ ದಳ, ರೆಡ್ ಕ್ರಾಸ್ ಸಿಬ್ಬಂದಿ, ರೇಲ್ವೆ ನಾಗರಿಕ ಸುರಕ್ಷೆ ಹಾಗೂ ರಕ್ಷಣಾ ಸಂಸ್ಥೆ, ವೈದ್ಯಕೀಯ ಸಿಬ್ಬಂದಿ, ಪ್ರಧಾನ ಮುಖ್ಯ ರೇಲ್ವೆ ಸುರಕ್ಷಾ ಅಧಿಕಾರಿ ಎಂ. ರಾಮಕೃಷ್ಣ ನೇತೃತ್ವದಲ್ಲಿ, ಅಣಕು ಕಾರ್ಯಾಚರಣೆ ಕೈಗೊಂಡರು.

<><><>

**ಕರ್ನಾಟಕ ವಿಶ್ವವಿದ್ಯಾಲಯದ,** ಅರ್ಥಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗದ, ಪ್ರಾಧ್ಯಾಪಕ ಬಿ.ಎಚ್. ನಾಗೂರ ಅವರನ್ನು, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಿ, ರಾಜ್ಯ ಸರ್ಕಾರ ಆದೇಶಿಸಿದೆ. ಕರ್ನಾಟಕ ಜ್ಞಾನ ಆಯೋಗದ, ರಾಜ್ಯ ಯೋಜನಾ ಇಲಾಖೆಯಲ್ಲಿ, ಜ್ಞಾನ ಫೆಲೋ ಆಗಿ ಅವರು, ಕಾರ್ಯನಿರ್ವಹಿಸಿದ್ದಾರೆ.

<><><>

**ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ** ಹಿರಿಯ ಗಾಯಕ, ಧಾರವಾಡದ ಪಂಡಿತ ಸೋಮನಾಥ ಮರಡೂರ, 2025ನೇ ಸಾಲಿನ, ಇನ್ಫೋಸಿಸ್' ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸಂಸ್ಮರಣೆ ಪುರಸ್ಕಾರಕ್ಕೆ, ಆಯ್ಕೆಯಾಗಿದ್ದಾರೆ. ಖ್ಯಾತ ತಬಲಾ ವಾದಕ, ಮಹಾರಾಷ್ಟ್ರದ, ಲಾತೂರ ಜಿಲ್ಲೆಯ, ಸಂಸ ಊರಿನ, ಪಂಡಿತ ಮುಖೇಶ ಶ್ರೀಪತ್‌ರಾವ್ ಜಾಧವ ಅವರು, ಉಸ್ತಾದ್ ಬಾಲೇಖಾನ್ ಸಂಸ್ಮರಣೆ, ಸಹ ವಾದ್ಯ ಕಲಾವಿದ ಪ್ರಶಸ್ತಿಗೆ, ಭಾಜನರಾಗಿದ್ದಾರೆ. ಬೆಂಗಳೂರಿನ, ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಫೌಂಡೇಷನ್ ಹಾಗೂ ಧಾರವಾಡದ, ಭಾರತೀಯ ಸಂಗೀತ ವಿದ್ಯಾಲಯ, ಸೃಜನಾ ರಂಗ ಮಂದಿರದಲ್ಲಿ, ಇದೇ 13 ಹಾಗೂ 14 ರಂದು, ಎರಡು ದಿನಗಳ ಕಾಲ, ಸಂಜೆ 5.30ಕ್ಕೆ ಆಯೋಜಿಸಿರುವ, ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸಂಗೀತೋತ್ಸವ – ಸ್ಮರಣೆ ಕಾರ್ಯಕ್ರಮದಲ್ಲಿ, ಪುರಸ್ಕಾರಗಳನ್ನು ಪ್ರದಾನಿಸಿ, ಗೌರವಿಸಲಾಗುವುದು ಎಂದು, ಸಿತಾರ ರತ್ನ ಸಮಿತಿ ಅಧ್ಯಕ್ಷ ರಾಘವೇಂದ್ರ ಆಯಿ, ತಿಳಿಸಿದ್ದಾರೆ.

<><><>

**ಕೇಂದ್ರ ಮಹಿಳಾ ಮತ್ತು** ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಾರಥ್ಯದಲ್ಲಿ, 'ಮಗುವಿನ ಆರೋಗ್ಯ ಹಾಗೂ ಪೌಷ್ಟಿಕತೆ' ಧ್ಯೇಯದೊಂದಿಗೆ, 8ನೇ ರಾಷ್ಟ್ರೀಯ ಪೋಷಣ್ ಮಾಹ್ – ಮಾಸಾಚರಣೆ, ನಾಳೆಯಿಂದ, ಅಕ್ಟೋಬರ್ 11ರ ವರೆಗೆ, ದೇಶಾದ್ಯಂತ ನಡೆಯಲಿದೆ.

<><><>

**ಬೆಂಗಳೂರಿನ ಬಿ.ಆರ್. ಅಂಬೇಡ್ಕರ್ ವೈದ್ಯಕೀಯ** ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ, ಪೌಷ್ಟಿಕಾಂಶ ಆಹಾರ ತಜ್ಞೆ, ಶ್ವೇತಾ ಕ್ಯಾತನಗೌಡರ, ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಯ, ಸರಳ ಉಪಾಯಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಧಾರವಾಡ ಜಿಲ್ಲೆ, ನವಲಗುಂದ ತಾಲೂಕು,** ಗುಡಿಸಾಗರ ಕೆರೆಯ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡ, 18 ಜನರಿಗೆ, ನವಲಗುಂದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಗುಡಿಸಾಗರ ಗ್ರಾಮದಲ್ಲಿ ಆರಂಭಿಸಲಾದ, ತಾತ್ಕಾಲಿಕ ಆಸ್ಪತ್ರೆಯಲ್ಲಿ, 9 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಓರ್ವರನ್ನು, ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಗೆ, ದಾಖಲಿಸಲಾಗಿದೆ. 70ಕ್ಕೂ ಹೆಚ್ಚು ಜನ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ ಎಂದು, ನವಲಗುಂದ ಸರ್ಕಾರಿ ಆಸ್ಪತ್ರೆಯ, ತಾಲೂಕು ವೈದ್ಯಾಧಿಕಾರಿ, ತಿಳಿಸಿದ್ದಾರೆ. ಜಿಲ್ಲಾಧಿಕಾರಿ ದಿವ್ಯಾ ಪ್ರಭು ಹಾಗೂ ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಭೇಟಿ ನೀಡಿ, ಪರಿಶೀಲಿಸಿದರು. 30 ಜನ ಆಶಾ ಕಾರ್ಯಕರ್ತೆಯರ ತಂಡ ರಚಿಸಿ, ಮನೆ ಮನೆ ಸಮೀಕ್ಷೆ ಆರಂಭಿಸಲಾಗಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**